ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

ಹೇಳಿಕೆ ಹಾಳೆ
(ಆರ್.ಪಿ. ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 820/2022

.....................................................................

CW 11
PW 04

| | | |
|---|---|---|
| ಹೆಸರು | : | ಪ್ರಕಾಶ ಮೂಳೆ |
| ತಂದೆಯ ಹೆಸರು | : | ದೂದಪ್ಪ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಎ ಎಸ್ಐ, ಹಳಿಯಾಳ ಪೊಲೀಸ ಠಾಣೆ, |
| ವಾಸಸ್ಥಳ | : | ಹಳಿಯಾಳ. |

ದಿನಾಂಕ 20-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ**: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು 2018 ರಿಂದ ಇಲ್ಲಿಯವರೆಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಎ ಎಸ್ಐ, ಆಗಿ ಕರ್ತವ್ಯ ನಿರ್ವಹಿಸಿರುತ್ತಿದ್ದೇನೆ.

ದಿನಾಂಕ 09-05-2022 ರಂದು ಮಧ್ಯಾಹ್ನ 02-00 ರಿಂದ 09-00 ಗಂಟೆಯ ವರೆಗೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ 1 ರವರು ನೀಡಿದ ಪಿರ್ಯಾದು ಮತ್ತು ಪಂಚನಾಮೆಯನ್ನು ಪಡೆದು, ಠಾಣಾ ಗುನ್ನಾ ನಂಬರ 79/2022 ರಂತೆ ದಾಖಲಿಸಿ,ಪ್ರ.ವ.ವ ಅನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರಿನೊಂದಿಗೆ ಮು.ಮಾ ಗಳನ್ನು ಸಹ ಪಡೆದುಕೊಂಡಿರುತ್ತೇನೆ. ಸದರಿ ಮು.ಮಾ. ಗಳನ್ನು ಪಿ ಎಫ್ ಹಾಕಿ ದೂರಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 2 ಬಿ ಎಂದು** ಗುರುತಿಸಲಾಯಿತು. ಪಿ ಎಫ್ ಅನ್ನು **ನಿಪಿ 4 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ 4 ಎ ಎಂದು** ಗುರುತಿಸಲಾಯಿತು. ಅದರ ಮಾಹಿತಿಯನ್ನು ಜಿಲ್ಲಾ ಅಬಕಾರಿಯವರಿಗೆ ಕಳುಹಿಸಿರುತ್ತೇನೆ. ಪ್ರ.ವ.ವ ಅನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 5 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 5 ಎ ಎಂದು** ಗುರುತಿಸಲಾಯಿತು.

ನಂತರ ಈ ಪ್ರಕರಣದ ಆರೋಪಿ ಕಲಂ 41 ಎ ರಡಿಯಲ್ಲಿ ನೊಟೀಸ್ ನೀಡಿ ದಸ್ತಗೀರ್ ನಿಯಮ ಪಾಲಿಸಿರುತ್ತೇನೆ.

ದಿನಾಂಕ 10-05-2022 ರಂದು ಜಪ್ತುಪಡಿಸಿದ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಸೂಚನಾ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 6 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 6 ಎ ಎಂದು** ಗುರುತಿಸಲಾಯಿತು. ಸಮೂಚಿತ ಮಾರ್ಗವಾಗಿ ಕಳುಹಿಸಿದ ಕೋರಿಕೆ ಪತ್ರವನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 7 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 7 ಎ ಎಂದು** ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತವನ್ನು ದಿನಾಂಕ 11-05-2022 ರಂದು ಚಾಸಾ 12 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಮು.ಮಾಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗ ನ್ಯಾಯಾಲಯದ ಮುಂದೆ ಇರುತ್ತವೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದ ಮುಂದೆ ಗೈರು ಹಾಜರು ಇದ್ದ ಕಾರಣ ಆತನನ್ನು ಗುರುತಿಸುವಿಕೆಯ ಬಗ್ಗೆ ಆತನ ಪರ ವಕೀಲರ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿಯ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ನೀವು ಈ ಪ್ರಕರಣದಲ್ಲಿ ದೂರನ್ನು ಸ್ವೀಕರಿಸಿಲ್ಲ, ಪ್ರ.ವ.ವ.ತಯಾರಿಸಿಲ್ಲ,ಚಾಸಾ 1 ರವರಿಂದ ಯಾವುದೇ ಮು.ಮಾ. ಗಳನ್ನು ಸ್ವೀಕರಿಸಿಲ್ಲ, ಪಿ ಎಫ್ ಹಾಕಿಲ್ಲ, ಆರೋಪಿತನಿಗೆ ನೋಟೀಸ್ ನೀಡಿಲ್ಲ, ಮು .ಮಾ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿದಿದ್ದರೂ ಸಹ ಆತನ ವಿರುದ್ದ ಸುಳ್ಳು ತನಿಖೆ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ